Impact Factor (SJIF): 6.092 E-ISSN: 2583-1615

International Journal of Research in Academic World

Received: 17/September/2023 IJRAW: 2023; 2(10):51-53 Accepted: 15/October/2023

# ಶಕ್ತಿ ಯೋಜನೆ ಕುರಿತು ಒಂದು ಸಮಾಜಶಾಸ್ತಿçÃಯ ಅವಲೋಕನ (ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿಗೆ ಸಂಬAಧಿಸಿದAತೆ)

**[*1]Dr. Sanganagowda Shivanagowda and [2]Vijayalakshmi Katti**

[*1]Assistant Professor, Department of Lecturer, Government Graduate College, Sindanur Government Degree College, Sindanur, Karnataka, India.

[2]Lecturer, Department of Sociology, Government Degree College, Sindhanur, Karnataka, India.

**ಸಾರಾಂಶ**

ಪ್ರಾಚೀನ ಕಾಲದಿಂದಲೂ ಭಾರತೀಯ ಸಮಾಜದಲ್ಲಿ ಮಹಿಳೆಯರು ಹಲವಾರು ಅವಕಾಶಗಳಿಂದ ವಂಚಿತರಾಗುತ್ತಾ ಬಂದಿದ್ದಾರೆ. ಒಂದು ಕಾಲದಲ್ಲಿ ಅವಳನ್ನು ಅಸ್ತಿತ್ವವಿಲ್ಲದ ಗುಲಾಮಗಳಂತೆ ಕೀಳಾಗಿ ನಡೆಸಿಕೊಂಡು ಅನೇಕ ರೀತಿಯಲ್ಲಿ ಶೋಷಣೆಗೆ ಒಳಗಾಗಿದ್ದಳು. ಅದೇ ಕಾಲದಲ್ಲಿ ಒಂದು ಹೆಜ್ಜೆ ಮುಂದೆ ಹೋಗಿ ನೋಡಿದಾಗ ಮಹಿಳೆಯನ್ನು ದೇವತೆಗೆ ಹೋಲಿಸಿದ ಉದಾಹರಣೆಗಳಿವೆ. ಹೀಗೆ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಾ ಬಂದಿರುವ ಮಹಿಳೆಯರಿಗೆ ಪುರುಷರಷ್ಟೇ ಸರಿಸಮಾನವಾದ ಅಂತಸ್ತು ಮತ್ತು ಅವಕಾಶಗಳನ್ನು ಕೊಡಲು ಅವರನ್ನು ಸಬಲರನ್ನಾಗಿ ಮಾಡಲು ಅನೇಕ ಅಭಿವೃದ್ಧಿ ಕಾರ್ಯಯೋಜನೆಯನ್ನು ಕೈಗೊಳ್ಳಲಾಯಿತು. ಮಹಿಳೆಯರಿಗೆ ಉಚಿತ ಬಸ್ ಸೇವೆಯನ್ನು ಒದಗಿಸುವ ಮೂಲಕ ಅವರನ್ನು ಸಾಮಾಜಿಕವಾಗಿ ಮುಖ್ಯವಾಹಿನಿಗೆ ತರಲು ಮತ್ತು ಆರ್ಥಿಕವಾಗಿ ಸಬಲೀಕರಣಗೊಳಿಸುವ ಶಕ್ತಿಯಾಗಿದೆ. ಪ್ರಸ್ತುತ ಲೇಖನದಲ್ಲಿ ಕರ್ನಾಟಕ ಶಕ್ತಿ ಯೋಜನೆಯನ್ನು ಕುರಿತು ಅವಲೋಕಿಸಲಾಗಿದೆ.

**ಪ್ರಮುಖ ಪದ:** ಮಹಿಳೆಯರಿಗೆ ಉಚಿತ ಬಸ್ ಸೇವೆ, ಸಬಲೀಕರಣ,ಶಕ್ತಿ ಯೋಜನೆ

## ಪರಿಚಯ

ಈ ಯೋಜನೆಯು ಕರ್ನಾಟಕ ಸರಕಾರದ ಪ್ರಮುಖ ಒಂದು ಯೋಜನೆಯಾಗಿದೆ. ಇದನ್ನು ಜೂನ 11, 2023 ರಂದು ಪ್ರಾರಂಭಿಸಲಾಯಿತು. ಈ ಯೋಜನೆಯಡಿ ರಾಜ್ಯದ ಎಲ್ಲಾ ಮಹಿಳಾ ಫಲಾನುಭವಿಗಳಿಗೆ ಕರ್ನಾಟಕದಾದ್ಯಂತ ಉಚಿತ ಬಸ್ ಸೇವೆಯನ್ನು ಒದಗಿಸಲಾಗುತ್ತದೆ. ಉಚಿತ ಪ್ರಯಾಣವು ಕರ್ನಾಟಕ ರಾಜ್ಯದ ಗಡಿಯೊಳಗೆ ಮಾತ್ರ ಅನ್ವಿಸುತ್ತದೆ. ಮಹಿಳೆಯರು ಉಚಿತ ಬಸ್ ಪ್ರಯಾಣದಲ್ಲಿ ಯಾವುದಾದರೂ ಒಂದು ಗುರುತಿನ ಚೀಟಿಯನ್ನು ತೋರಿಸಿ ಅಂದರೆ ಆಧಾರ ಕಾರ್ಡ, ಮತದಾರರ ಚೀಟಿ, ಬ್ಯಾಂಕ ಪಾಸ್ ಬುಕ್, ಇನ್ನಿತರ ದಾಖಲೆಗಳನ್ನು ತೋರಿಸಿ ಪ್ರಯಾಣ ಮಾಡಬಹುದಾಗಿದೆ. ಮಹಿಳೆಯರಿಗೆ ಶೂನ್ಯ ಮೊತ್ತದ ಟಿಕೇಟನ್ನು ಒದಗಿಸಲಾಗುತ್ತದೆ. ಈ ಯೋಜನೆಯಡಿಯಲ್ಲಿ ಪ್ರತಿ ದಿನ ಸುಮಾರು 41 ಲಕ್ಷ ಮಹಿಳೆಯರು ಉಪಯೋಗವನ್ನು ಪಡೆದಿದ್ದಾರೆ ಎಂದು ತಿಳಿದುಬಂದಿದೆ. ಹಾಗೇಯೆ ಇನ್ನು ಅನೇಕ ಕುಗ್ರಾಮಗಳಲ್ಲಿ ವಾಸುತ್ತಿದ್ದ ಮಹಿಳೆಯರಿಗೆ ಈ ಯೋಜನೆ ಯ ಬಳಕೆ ಸಾಧ್ಯವಾಗುತ್ತಿಲ್ಲ, ಕಾರಣ ನಮ್ಮ ಗ್ರಾಮಗಳಿಗೆ ಬಸ್‌ಗಳ ಮತ್ತು ರಸ್ತೆಗಳ ಸೇವೆ ಸರಿಯಾಗಿಲ್ಲದ್ದರಿಂದ ಈ ಯೋಜನೆಯನ್ನು ಪಡೆಯಲು ಸಾಧ್ಯವಾಗಿಲ್ಲ ಎಂದು ತಿಳಿದುಬಂದಿದೆ.

## ಶಕ್ತಿ ಯೋಜನೆ ಎಂದರೇನು?

ಮಹಿಳೆಯರಿಗೆ ಸ್ವಾವಲಂಬನೆಯ ಬದುಕು, ಆತ್ಮವಿಶ್ವಾಸ, ಆರ್ಥಿಕ, ಸಾಮಾಜಿಕ, ಪ್ರಗತಿಯನ್ನು ಸಾಧಿಸುವಂತಹ ಹಾಗೂ ಬದಲಾವಣೆಯನ್ನು ತರುವಂತಹ ಪ್ರಕ್ರಿಯೆಯನ್ನು ಶಕ್ತಿ ಯೋಜನೆ ಎನ್ನುವರು.

ಇಂಡಿಯನ್ ಇನಸ್ಟಿಟ್ಯೂಟ್ ಆಫ್ ಸೈನ್ಸ್ ತಜ್ಞರಾದ ಆಶಿಶ್ ಮರ್ವ ಈ ಶಕ್ತಿ ಯೋಜನೆಯ ಕುರಿತು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ಮಹಿಳೆಯರ ಬದುಕನ್ನು ಸುಧಾರಿಸುವಲ್ಲಿ ಇದೊಂದು ಉತ್ತಮ ಹೆಜ್ಜೆಯಾಗಿದೆ ಮತ್ತು ವಿಶೇಷವಾಗಿ ಮಧ್ಯಮ ಮತ್ತು ಕಡಿಮೆ ಆದಾಯದ ಕುಟುಂಬಗಳಿಗೆ ಉತ್ತಮವಾದ ಯೋಜನೆ ಆಗಿದೆ ಎಂದು ಹೇಳಿದ್ದಾರೆ.

ಮಹಿಳಾ ಕೃಷಿ ಕಾರ್ಮಿಕರಿಗೆ, ಗಾರ್ಮೆಂಟ್ಸ್ ಕೆಲಸಗಾರರಿಗೆ, ದಿನಗೂಲಿ ಕಾರ್ಮಿಕರಿಗೆ ಹಾಗೂ ಮನೆಯ ಗೃಹಣಿಯರಿಗೆ, ವಿದ್ಯಾರ್ಥಿನೀಯರಿಗೆ ಈ ಯೋಜನೆಯು ಸಹಾಯಕವಾಗಿದೆ. ಇದರಿಂದ ಉಳಿದ ಹಣ ಇನ್ನಿತರ ಅಗತ್ಯಗಳಿಗೆ ಬಳಸಬಹುದೆಂದು ಹೇಳುತ್ತಾರೆ.

ಬಾಗಲಕೋಟೆಯ ದಾನಮ್ಮ ಹತ್ತು ವರ್ಷಗಳ ನಂತರ ಮೊದಲ ಬಾರಿಗೆ ಕೆ.ಎಸ್.ಆರ್.ಟಿ.ಸಿ ಬಸ್ಸ ನಲ್ಲಿ ಪ್ರಯಾಣಿಸುತ್ತಿದ್ದೇನೆ. ಎಕೆಂದರೆ ಸರಕಾರವು ಮಹಿಳೆಯರಿಗೆ

***Corresponding Author:** Dr. Sanganagowda Shivanagowda

ಉಚಿತ ಬಸ್ ಪ್ರಯಾಣವನ್ನು ಮಾಡಿದ್ದರಿಂದ ನಾನು ಧಾರ್ಮಿಕ ಸ್ಥಳಗಳಿಗೆ ಮತ್ತು ಪ್ರೇಕ್ಷಣಿಯ ಸ್ಥಳಗಳಿಗೆ ಹೋಗಿ ಬರಲು ಸಾಧ್ಯವಾಯಿತು ಎಂದು ಮೆಚ್ಚಿಗೆಯನ್ನು ವ್ಯಕ್ತಪಡಿಸಿದಳು.

ನಮ್ಮ ಸುತ್ತಮುತ್ತ ಗ್ರಾಮೀಣ ಪ್ರದೇಶದ ಮಹಿಳಾ ರೈತರು ತಾವು ಬೆಳೆದ ತರಕಾರಿಗಳನ್ನು ತಾಲೂಕ ಮತ್ತು ಜಿಲ್ಲಾ ಕೇಂದ್ರಗಳಿಗೆ ಹೋಗಿ ಮಾರಾಟ ಮಾಡಲು ಅನುಕೂಲವಾಗಿದೆ ಎಂದು ತಿಳಿದುಬಂದಿದೆ. ಈ ಶಕ್ತಿ ಯೋಜನೆಯಿಂದ ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಗಳಿಗೆ ಹೆಚ್ಚು ಲಾಭದಾಯಕವಾಗಿದೆ (ಸು.54 ಕೋಟಿ) ರೂ ಗಳಿಸಿದೆ ಎಂದು ತಿಳಿದು ಬಂದಿದೆ. ಆದರೆ ಈ ಶಕ್ತಿ ಯೋಜನೆಯಿಂದ ಸರಕಾರಕ್ಕೆ ೪ ಸಾವಿರ ಕೋಟಿ ಹಣ ನಷ್ಟವನ್ನು ಅನುಭವಿಸಬೇಕಾಗುತ್ತದೆ ಎಂದು ಪ್ರೊ ಡಿ ರಾಜಶೇಖರ ಅಭಿಪ್ರಾಯ ಪಡುತ್ತಾರೆ.

### ಶಕ್ತಿ ಯೋಜನೆಯ ಅನುಕೂಲಗಳು,

ಎಲ್ಲಾ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಅನುಕೂಲಕರವಾಗಿದೆ, ಕರ್ನಾಟಕದಲ್ಲಿರುವ ವಿವಿಧ ಭಾಗದ ಪ್ರತಿಷ್ಠಿತ ದೇವಸ್ಥಾನಗಳನ್ನು ಹಾಗೂ ಪ್ರವಾಸಿ ತಾಣಗಳನ್ನು ನೋಡಬಹುದಾಗಿದೆ, ಮಹಿಳಾ ರೈತರಿಗೆ ತಮ್ಮ ವಸ್ತುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ತೆಗೆದುಕೊಂಡು ಹೋಗಲು ಸಹಕಾರಿಯಾಗಿದೆ, ಶಕ್ತಿ ಯೋಜನೆಯಿಂದ ಸ್ವಲ್ಪ ಮೆಟ್ಟಿಗೆ ಹಣವನ್ನು ಉಳಿತಾಯ ಮಾಡಬಹುದಾಗಿದೆ ಹಾಗೂ ಈ ಹಣವನ್ನು ಬೇರೆಯದಕ್ಕೆ ಬಳಸಬಹುದಾಗಿದೆ, ದೂರದ ಸಂಬAಧಿಕರನ್ನು ಭೇಟಿ ಆಗಲು ಬಹಳ ಅನುಕೂಲಕರವಾಗಿದೆ, ಗೃಹಣಿಯರಿಗೆ ಸಮಾಜದ ಮುಖ್ಯವಾಹಿನಿಗೆ ಬರುವ ಅವಕಾಶ, ವಿದ್ಯಾರ್ಥಿನೀಯರಿಗೆ ಕೂಡ ಶಕ್ತಿ ಯೋಜನೆ ಅನುಕೂಲವಾಗಿದೆ.

### ಶಕ್ತಿ ಯೋಜನೆಯ ಅನಾನುಕೂಲಗಳು,

ಈ ಶಕ್ತಿ ಯೋಜನೆಯಿಂದ ವಿದ್ಯಾರ್ಥಿಗಳಿಗೆ ತೊಂದರೆ ಆಗಿದೆ, ಖಾಸಗಿ ವಾಹನ ಮಾಲಿಕರಿಗೆ ಆರ್ಥಿಕ ನಷ್ಟವನ್ನು ಅನುಭವಿಸುತ್ತಿದ್ದಾರೆ, ವೃತ್ತಿನಿರತ ಪುರುಷ ಮತ್ತು ಮಹಿಳೆಯರಿಗೆ ಸೀಟಗಳು ಸಿಗದೆ ಇರುವುದು, ವಯೋವೃದ್ಧರಿಗೆ ಹಾಗೂ ಅಂಗವಿಕಲಚೇತನರಿಗೆ ತೊಂದರೆ, ಬಸ್ ನಿರ್ವಾಹಕರಿಗೂ ಸಹ ತೋಂದರೆ, ಉಚಿತ ಬಸ್ ಪ್ರಯಾಣದಿಂದ ಮಹಿಳೆಯರ ಗೌರವಕ್ಕೆ ಆಂತಕ, ಕೌಟುಂಬಿಕ ಕಲಹಗಳ ಹೆಚ್ಚಳ, ಬಸ್‌ನಲ್ಲಿ ಸೀಟಿಗಾಗಿ ಮಹಿಳೆ, ಮಹಿಳೆಯರೆ ಜಗಳಕ್ಕೆ ದಾರಿ, ಧಾರ್ಮಿಕ ಕ್ಷೇತ್ರಗಳಲ್ಲಿ ಸ್ವಚ್ಛತೆಯ ಕೊರತೆ. ಸರಕಾರಕ್ಕೆ ಆರ್ಥಿಕ ನಷ್ಟ ಉಂಟಾಗುತ್ತದೆ.

### ಅಧ್ಯಯನದ ಮಹತ್ವ

ಉದ್ಯೋಗಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಕಡಿಮೆ ಆಗುತ್ತಿರುವುದರಿಂದ ಶಕ್ತಿ ಯೋಜನೆ ಉಚಿತ ಬಸ್ ಪ್ರಯಾಣ ತರುವುದರಿಂದ ಮಹಿಳೆಯರು ಹೆಚ್ಚು ಹೆಚ್ಚು ಉದ್ಯೋಗಗಳಿಗೆ ಹೋಗಲು ಅವಕಾಶ ಕೊಟ್ಟಾಂತಾಗುತ್ತದೆ. ಈ ಯೋಜನೆಯು ಮಹಿಳಾ ಉದ್ಯೋಗಿಗಳಿಗೆ ಸಹಾಯವಾಗುತ್ತದೆ. ಇದರಿಂದ ರಾಜ್ಯ ಮತ್ತು ದೇಶದ ಅಭಿವೃದ್ಧಿಗೆ ಪ್ರಮುಖ ಪಾತ್ರವಹಿಸುತ್ತದೆ. ಒಟ್ಟಾರೆ ಕರ್ನಾಟಕದ ಮಹಿಳೆಯರು ಸಬಲೀಕರಣಗೊಂಡಾಗ ಆರ್ಥಿಕ, ಸಾಮಾಜಿಕ, ಅಸಮಾನತೆಯನ್ನು ಅಳಿಸಿಹಾಕಲು ಸಾಧ್ಯವಾಗುತ್ತದೆ. ರಾಜ್ಯದ ಮುಖ್ಯವಾಹನಿಗೆ ಮಹಿಳೆಯರನ್ನು ಕರೆ ತರಲು ಮತ್ತು ಆರ್ಥಿಕವಾಗಿ ಸಬಲೀಕರಣಗೊಳಿಸುವಲ್ಲಿ ಈ ಶಕ್ತಿ ಯೋಜನೆ ಪ್ರಮುಖ ಪಾತ್ರವಹಿಸುತ್ತದೆ.

### ಅಧ್ಯಯನದ ಕ್ಷೇತ್ರ

ಕರ್ನಾಟಕ ಶಕ್ತಿ ಯೋಜನೆಯನ್ನು ತಿಳಿದುಕೊಳ್ಳಲು ಒಂದು ಸಮಾಜಶಾಸ್ತ್ರೀÃಯ ಅವಲೋಕನವನ್ನು ರಾಯಚೂರು ಜಿಲ್ಲೆಯ ಸಿಂಧನೂರು ನಗರವನ್ನು ಆಯ್ಕೆ ಮಾಡಿಕೊಂಡು ಅಧ್ಯಯನವನ್ನು ಮಾಡಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಸಿಂಧನೂರು ಭತ್ತದ ಕಣಜ, 40 ಕ್ಕೂ ಹೆಚ್ಚು ಕಾಲೇಜುಗಳನ್ನು ಹೊಂದಿದೆ.ಟ್ರಾಕ್ಟರ್ ಮಾರಾಟದಲ್ಲಿ ಏಷ್ಯಖಂಡದಲ್ಲಿ ಮೊದಲನೇಯ ಸ್ಥಾನವನ್ನು ಪಡೆದಿದೆ. 2011ರ ಜನಗಣತಿಯ ಪ್ರಕಾರ 3,60,164 ಜನಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ಪುರುಷರು 2050212 ಮತ್ತು ಮಹಿಳೆಯರು 1,55052 ರಷ್ಟು ಇದ್ದಾರೆ.

### ಅಧ್ಯಯನದ ವಿನ್ಯಾಸ

ಕರ್ನಾಟಕ ಶಕ್ತಿ ಯೋಜನೆಯ ಒಂದು ಸಮಾಜಶಾಸ್ತ್ರೀÃಯ ಅವಲೋಕನ ಅಧ್ಯಯನವನ್ನು ಗಮನದಲ್ಲಿಟ್ಟುಕೊಂಡು ಗ್ರಾಮೀಣ, ನಗರ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ನೀಡುವುದರಿಂದ ಸಾಮಾಜಿಕ, ಆರ್ಥಿಕವಾಗಿ ಸಬಲೀಕರಣದ ಅರಿವು ಮೂಡಿಸುವ ಮತ್ತು ಸ್ವಾವಲಂಬನೆಯ ಬದುಕನ್ನು ಕಟ್ಟಿಕೊಳ್ಳಲು ಈ ಯೋಜನೆಯು ವಿವರಣಾತ್ಮಕ ಸಂಶೋಧನೆಯನ್ನು ಬಳಸಲಾಗಿದೆ.

### ನಮೂನೆ ವಿಧಾನ

ಕರ್ನಾಟಕ ಶಕ್ತಿ ಯೋಜನೆಯ ಒಂದು ಸಮಾಜಶಾಸ್ತ್ರೀÃಯ ಅವಲೋಕನ ಅಧ್ಯಯನದಲ್ಲಿ 50 ಜನ ಮಾಹಿತಿದಾರರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

### ಪ್ರಾಥಮಿಕ ದತ್ತಾಂಶ

ಈ ಅಧ್ಯಯನವು ಪ್ರಾಥಮಿಕ ಮತ್ತು ಮಾಧ್ಯಮಿಕ ದತ್ತಾಂಶಗಳನ್ನು ಒಳಗೊಂಡಿದೆ. ಇಲ್ಲಿ 50 ಜನರನ್ನು ಆಯ್ಕೆ ಮಾಡಿ ಅವರನ್ನು ಭೇಟಿಮಾಡಿ ಪ್ರಶ್ನಾವಳಿಯ ಮೂಲಕ ಮಾಹಿತಿಯನ್ನು ಸಂಗ್ರಹಿಸಿ ದತ್ತಾಂಶಗಳನ್ನು ಈ ಕೆಳಗೆ ಶೇಕಡಾವಾರುಗಳಲ್ಲಿ ತಿಳಿಸಲಾಗಿದೆ.

**ಟೇಬಲ್ 1:** ಈ ಶಕ್ತಿ ಯೋಜನೆಯು ಮಹಿಳೆಯರಿಗೆ ಎಷ್ಟು ಉಪಯೋಗವಾಗಿದೆಯೇ?

| ಕ್ರ.ಸಂ | ಈ ಶಕ್ತಿ ಯೋಜನೆಯು ಮಹಿಳೆಯರಿಗೆ ಎಷ್ಟು ಉಪಯೋಗವಾಗಿದೆಯೇ? | | ಪ್ರತಿಶತ |
|---|---|---|---|
| 1 | ಹೌದು | 48 | 96% |
| 2 | ಇಲ್ಲ | 02 | 04% |
| MlÄÖ | | 50 | 100% |

ಈ ಕೊಷ್ಟಕದಿಂದ ತಿಳಿದು ಬರುವುದು ಎಂದರೆ ಕರ್ನಾಟಕ ಶಕ್ತಿ ಯೋಜನೆ ಮಹಿಳೆಯರಿಗೆ ಶೇ ೯೬% ರಷ್ಟು ಉಪಯೋಗವಾಗಿದೆ ಎಂದು ತಿಳಿದು ಬಂದರೆ ಇನ್ನು ಶೇ 40% ರಷ್ಟು ಮಹಿಳೆಯರು ಇದರ ಉಪಯೋಗವಿಲ್ಲ ಎಂದು ಹೇಳಿದ್ದಾರೆ.

**ಟೇಬಲ್ 2:** ಈ ಶಕ್ತಿ ಯೋಜನೆಯು ವೃತ್ತಿನಿರತ ಮಹಿಳೆಯರಿಗೆ ಅನುಕೂಲವಾಗಿದೆಯೇ?

| ಕ್ರ.ಸಂ | ಈ ಶಕ್ತಿ ಯೋಜನೆಯು ವೃತ್ತಿನಿರತ ಮಹಿಳೆಯರಿಗೆ ಅನುಕೂಲವಾಗಿದೆಯೇ? | | ಪ್ರತಿಶತ |
|---|---|---|---|
| 1 | ಹೌದು | 48 | 96% |
| 2 | ಇಲ್ಲ | 02 | 04% |
| MlÄÖ | | 50 | 100% |

ಈ ಕೊಷ್ಟಕದಿಂದ ತಿಳಿದು ಬರುವುದು ಎಂದರೆ ಶಕ್ತಿ ಯೋಜನೆ ಮಹಿಳೆಯರಿಗೆ ಶೇ ೯೬% ರಷ್ಟು ಉಪಯೋಗವಾಗಿದೆ ಎಂದು ತಿಳಿದು ಬಂದರೆ ಇನ್ನು ಶೇ 96% ರಷ್ಟು ಮಹಿಳೆಯರು ಇದರ ಉಪಯೋಗವಿಲ್ಲ ಎಂದು ಹೇಳಿದ್ದಾರೆ.

***ಟೇಬಲ್* 3:** ಈ ಶಕ್ತಿ ಯೋಜನೆಯಿಂದ ವಿದ್ಯಾರ್ಥಿಗಳಿಗೆ ತೊಂದರೆ ಆಗಿದೆಯೇ?

| ಕ್ರ.ಸಂ | ಈ ಶಕ್ತಿ ಯೋಜನೆಯಿಂದ ವಿದ್ಯಾರ್ಥಿಗಳಿಗೆ ತೊಂದರೆ ಆಗಿದೆಯೇ? | | ಪ್ರತಿಶತ |
|---|---|---|---|
| 1 | ಹೌದು | 45 | 90% |
| 2 | ಇಲ್ಲ | 05 | 10% |
| MIÄÖ | | 50 | 100% |

ಈ ಕೊಷ್ಟಕದಿಂದ ತಿಳಿದು ಬರುವುದು ಎಂದರೆ ಶಕ್ತಿ ಯೋಜನೆಯಿಂದ ವಿದ್ಯಾರ್ಥಿಗಳಿಗೆ ತೊಂದರೆ ಆಗಿದೆಯೇ ಎಂದು ಕೇಳಿದ ಪ್ರಶ್ನೆಗೆ ಶೇ 90% ರಷ್ಟು ಹೌದು ಎಂದು ತಿಳಿದು ಬಂದರೆ ಇನ್ನು ಶೇ 10% ರಷ್ಟು ವಿದ್ಯಾರ್ಥಿಗಳು ಇಲ್ಲ ಎಂದು ಹೇಳಿದ್ದಾರೆ.

***ಟೇಬಲ್* 4:** ಈ ಶಕ್ತಿ ಯೋಜನೆಯು ತೃತೀಯಲಿಂಗದವರಿಗೂ ಉಪಯೋಗವಾಗಿದೆಯೇ?

| ಕ್ರ.ಸಂ | ಈ ಶಕ್ತಿ ಯೋಜನೆಯು ತೃತೀಯಲಿಂಗದವರಿಗೂ ಉಪಯೋಗವಾಗಿದೆಯೇ? | | ಪ್ರತಿಶತ |
|---|---|---|---|
| 1 | ಹೌದು | 46 | 92% |
| 2 | ಇಲ್ಲ | 04 | 08% |
| MIÄÖ | | 50 | 100% |

ಈ ಕೊಷ್ಟಕದಿಂದ ತಿಳಿದು ಬರುವುದು ಎಂದರೆ ಶಕ್ತಿ ಯೋಜನೆಯಿಂದ ತೃತೀಯಲಿಂಗದವರಿಗೂ ಉಪಯೋಗವಾಗಿದೆಯೇ ಎಂದು ಕೇಳಿದ ಪ್ರಶ್ನೆಗೆ ಶೇ ೯92% ರಷ್ಟು ಹೌದು ಎಂದು ತಿಳಿದು ಬಂದರೆ ಇನ್ನು ಶೇ 08% ರಷ್ಟು ತೃತೀಯಲಿಂಗಗಳು ಇಲ್ಲ ಎಂದು ಹೇಳಿದ್ದಾರೆ.

## ಉಪಸಂಹಾರ

ಒಟ್ಟಾರೆ ಕರ್ನಾಟಕ ಶಕ್ತಿ ಯೋಜನೆ ಮಹಿಳೆಯರಿಗೆ ಮಹತ್ವದಾಗಿದೆ. ಮಹಿಳೆಯರನ್ನು ಆರ್ಥಿಕವಾಗಿ, ಸಮಾಜ ಮುಖಿಯಾಗಿ, ಆತ್ಮ ವಿಶ್ವಾಸದಿಂದ ಸ್ವಾವಲಂಬನೆ ಬದುಕನ್ನು ಕಟ್ಟಿಕೊಳ್ಳಲು ಮಹಿಳೆಯರಿಗೆ ಈ ಶಕ್ತಿ ಯೋಜನೆ ಬಹಳ ಸಹಕಾರಿಯಾಗಿದೆ ಎಂದು ಹೇಳಬಹುದು.

## ಉಲ್ಲೇಖಗಳು

1. ಭಾರತದಲ್ಲಿ ಮಹಿಳಾ ಅಧ್ಯಯನ-ಪ್ರೋ ಶೋಭಾದೇವಿ ಚೆಕ್ಕಿ
2. ಸಾಮಾಜಿಕ ಸಂಶೋಧನೆ-ಚ.ನ.ಶಂಕರರಾವ್
3. ಅAತರಜಾಲದ ಮಾಹಿತಿ ಮತ್ತು ದಿನಪತ್ರಿಕೆಗಳಿಂದ
4. ಪ್ರಾಥಮಿಕ ದತ್ತಾಂಶ ಮಾಹಿತಿಯಿಂದ
5. ದಿನ ಪತ್ರಿಕೆಗಳು